## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
## ಸಿಸಿ.659/2022

ಸಾಕ್ಷಿಯ ಹೆಸರುಃ ಸತೀಶ್ ಚಾಸಾಃ 4

ತಂದೆಯ ಹೆಸರುಃ ಲಕ್ಷ್ಮಣ ಗೌಡ ಪ್ರಾಸಾಃ 4

ವಯಸ್ಸುಃ 52 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಸಿಗಸೆ

ದಿನಾಂಕಃ 10/10/2025 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ-

ಶ್ರೀನಿವಾಸ ಗೌಡರ ಮನೆಯಲ್ಲಿ ಕಳ್ಳತನವಾಗಿದ್ದ ವಿಚಾರಕ್ಕೆ ಬಾಳೆಹೊನ್ನೂರು ಠಾಣೆಯಲ್ಲಿ 1 ಮತ್ತು 2 ನೇ ಅರೋಪಿಗಳನ್ನು ವಿಚಾರಣೆ ಮಾಡುತ್ತಿದ್ದಾಗ ನಾನು ಠಾಣೆಗೆ ಹೋಗಿರುತ್ತೇನೆ. ಮಹಜರ್ ಮಾಡುವ ಸಮಯದಲ್ಲಿ ನಾನು ಸದರಿ ಮಹಜರಿಗೆ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ಸಮಯದಲ್ಲಿ ಅಡಿಕೆ ಚೀಲವನ್ನು ಪೋಲಿಸರು ಅಮಾನತುಪಡಿಸಿಕೊಂಡಿರುತ್ತಾರೆ. 1 ನೇ ಆರೋಪಿ ಮನೆಗೆ ಪೋಲಿಸರು ಹೋಗಿ ಅಲ್ಲಿ ಮಚ್ಚನ್ನು ವಶಕ್ಕೆ ಪಡೆದುಕೊಂಡು ಬಾಳೆಹೊನ್ನೂರು ಅಂಗಡಿಗೆ ಹೋದರು. ಸದರಿ ಸ್ಥಳದಲ್ಲಿ ಪೋಟೋ ತೆಗೆಯಲಾಯಿತು.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸದರಿ ದಾಖಲೆ ಅಡಿಕೆ ಚೀಲಗಳ ಅಮಾನತು ಮಹಜರಾಗಿದ್ದು ಅದನ್ನು ನಿಪಿ.8 ಎಂದೂ ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಒಂದು ಪೋಟೋವನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ.9 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಅಡಿಕೆ ಮರಗಳನ್ನು ಕಡಿದ ಸ್ಥಳದ ಮಹಜರಾಗಿದ್ದು ಅದನ್ನು ನಿಪಿ.10 ಎಂದೂ ಸಾಕ್ಷಿಯ ಸಹಿಯನ್ನು

ನಿಪಿ.10(ಎ) ಎಂದೂ ಗುರುತಿಸಲಾಯಿತು. ಒಂದು ಪೋಟೋವನ್ನು ನಿಪಿ.11 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಕಳುವು ಮಾಲು ಸ್ವೀಕರಿಸಿದ ಅಂಗಡಿಯ ಮಹಜರಾಗಿದ್ದು ಅದನ್ನು ನಿಪಿ.12 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆಯಲಾದ ಒಂದು ಪೋಟೋವನ್ನು ನಿಪಿ.13 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಕೊಡಲಿ ಅಮಾನತು ಮಹಜರಾಗಿದ್ದು ಅದನ್ನು ನಿಪಿ.14 ಹಾಗೂ ಸಾಕ್ಷಿಯ ಸಹಿಯನ್ನು ನಿಪಿ.14(ಎ) ಎಂದು ಗುರುತಿಸಲಾಯಿತು. ಸದರಿ ಸಮಯದಲ್ಲಿ ತೆಗೆಯಲಾದ 2 ಪೋಟೋಗಳನ್ನು ನಿಪಿ.15 ಹಾಗೂ ನಿಪಿ.16 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಯಿತು. ಸದರಿ ದಾಖಲೆ ಆರೋಪಿಗಳ ಸ್ವ ಇಚ್ಛಾ ಹೇಳಿಕೆಯಾಗಿದ್ದು ಅವುಗಳನ್ನು ನಿಪಿ.17 ಹಾಗೂ ನಿಪಿ.18 ಹಾಗೂ ಅದರಲ್ಲಿರುವಾ ಸಾಕ್ಷಿಯ ಸಹಿಗಳನ್ನು ನಿಪಿ.17 (ಎ) ಹಾಗು ನಿಪಿ.18(ಎ) ಎಂದೂ ಗುರುತಿಸಲಾಯಿತು.

ನಿಪಿ.8 ರ ದಾಖಲೆಗೆ ನಾನು ಪೋಲಿಸ್ ಠಾಣೆಗೆ ಹೋದಾಗ ಸಹಿ ಮಾಡಿರುತ್ತೇನೆ. ನಂತರ ಶ್ರೀನಿವಾಸ ಗೌಡರ ತೋಟಕ್ಕೆ ಹೋದಾಗ ಪೋಟೋವನ್ನು ತೆಗೆಯಲಾಯಿತು ನಾನು ಅಲ್ಲೂ ಸಹಾ ಸಹಿ ಮಾಡಿರುತ್ತೇನೆ. ನಂತರ ಮತ್ತೊಂದು ದಾಖಲೆಗೆ 1 ನೇ ಆರೋಪಿಯ ಮನೆಯಲ್ಲಿ ಸಹಿ ಮಾಡಿರುತ್ತೇನೆ. ನಂತರ ಮತ್ತೊಂದು ದಾಖಲೆಗೆ ಬಾಳೆಹೊನ್ನೂರಿನ ಅಂಗಡಿಯಲ್ಲಿ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಒಂದು ಕೊಡಲಿಯನ್ನು ತೋರಿಸಿದ್ದು ಅದನ್ನು ಸಾಕ್ಷಿ ಗುರುತಿಸಿರುತ್ತಾರೆ ಹಾಗೂ ಸದರಿ ಕೊಡಲಿ 1 ನೇ ಆರೋಪಿಯ ಮನೆಯ ಸೌದೆ ರಾಶಿಯಲ್ಲಿತ್ತು ಎಂದು ಉತ್ತರಿಸಿದ್ದರಿಂದ ಅದನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು.

**(**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ**,** ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು**.)**

<u>ಪಾಟೀಸವಾಲುಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>

ದಿನಾಂಕಃ25/12/2021 ರಂದು ಸದರಿ ಪ್ರಕರಣದ ಆರೋಪಿಗಳ ಸ್ವ ಇಚ್ಛಾ ಹೇಳಿಕೆ ಪಡೆದಾಗ ನಾನು ಹಾಜರಿರುತ್ತೇನೆ ಎಂದರೆ ಸರಿ.

ದಿಃ26/12/2021 ರಂದು ಬಾಳೆಹೊನ್ನೂರು ಪಟ್ಟಣದ ಇಬ್ರಾಹಿಮ್ ಅವರ ಅಡಿಕೆ ವ್ಯಾಪಾರದ ಅಂಗಡಿಯ ಬಳಿ ಕಳುವು ಮಾಲನ್ನು ಪಡೆದ ಬಗ್ಗೆ ಮಹಜರ್ ಕ್ರಮವನ್ನು ಜರುಗಿಸಿದ್ದರು ಎಂದರೆ ಸರಿ. ಸದರಿ ದಿನ ಆರೋಪಿತರು ಅಡಿಕೆ ಮರಗಳನ್ನು ಕಡಿಯಲು ಮಚ್ಚನ್ನು ಬಳಸಿರುವುದಿಲ್ಲ, ಬದಲಾಗಿ ಕೊಡಲಿಯನ್ನು ಬಳಸಿದ್ದರು ಎಂದರೆ ಸರಿ.

<u>ಪಾಟೀ ಸವಾಲುಃ **1** ನೇ ಆರೋಪಿ ಪರಃ ಶ್ರೀ ಬಿಕೆವಿ **.,** ವಕೀಲರಿಂದಃ</u>

ಪೋಲೀಸ್ ಠಾಣೆಗೆ ಹೋಗಲಾಯಿತು ಎಂದು ನಾನು ನುಡಿದಿದ್ದು ಆ ರೀತಿ ಠಾಣೆಗೆ ಚಾಸಾ 5 ರವರೊಂದಿಗೆ ಹೋಗಿರುತ್ತೇನೆ. ಆ ರೀತಿ ಯಾವ ಉದ್ದೇಶಕ್ಕೆ ಠಾಣೆಗೆ ಹೋಗಿದ್ದೀರಿ ಎಂದರೆ ಶ್ರೀನಿವಾಸ ಗೌಡರ ತೋಟದಲ್ಲಿ ಕಳ್ಳತನವಾದ ಬಗ್ಗೆ ನಾನು ಠಾಣೆಗೇ ಹೋಗಿದ್ದೆನು. ಆ ರೀತಿ ಕಳ್ಳತನ ಯಾವ ದಿನಾಂಕದಂದು ಆಗಿತ್ತು ಎಂದು ಗೊತ್ತಿಲ್ಲ. ಆ ರೀತಿ ಒಟ್ಟು ಎಷ್ಟು ಕೆಜಿ ಅಡಿಕೆ ಕಳ್ಳತನವಾಗಿತ್ತು ಎಂದರೆ 110 ಕೆಜಿ ಅಡಿಕೆ ಕಳ್ಳತನವಾಗಿದ್ದ ಬಗ್ಗೆ ನನಗೆ ತಿಳಿದಿತ್ತು. ನಾನು ಠಾಣೆಗೆ ಹೋದಾಗ ಪೋಲಿಸರು ಹೇಳಿದ ಮೇರೆಗೆ ಆ ರೀತಿ 110 ಕೆಜಿ ಅಡಿಕೆ ಕಳ್ಳತನವಾದ ಬಗ್ಗೆ ನನಗೆ ತಿಳಿದಿರುತ್ತದೆ. ಚಾಸಾ 1 ರವರು ಯಾವಾಗ ದೂರು ನೀಡಿದರು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಕೃತ್ಯ ನಡೆಯಿತು ಎನ್ನಲಾದ ಪೂರ್ವದಲ್ಲಿ ಅಥವಾ ನಂತರ ನಾನು ಚಾಸಾ 1 ರವರನ್ನು ಭೇಟಿ ಮಾಡಿರುವುದಿಲ್ಲ.

ಅರಣ್ಯ ಪ್ರದೇಶವು ಸರ್ವೆ ನಂಬರ್ 158 ರಲ್ಲಿ ಬರುತ್ತದೆ. ಸದರಿ ಅರಣ್ಯ ಪ್ರದೇಶವು ವಾಸ್ತವವಾಗಿ ಅರಣ್ಯ ಪ್ರದೇಶವೇ ಆಗಿರುತ್ತದೆಯೇ ಅಥವಾ ಕಂದಾಯ ಇಲಾಖೆಗೆ ಸಂಬಂಧಿಸಿದ್ದಾಗಿರುತ್ತದೆಯೆ ಎಂದು ಪೋಲಿಸರು ದಾಖಲಾತಿಯ ಮೂಲಕ ನಿಮಗೆ ತಿಳಿಸಿ ನಿಮ್ಮ ಸಮಕ್ಷಮ ಬರವಣಿಗೆ ಮಾಡಲಾಗಿತ್ತೆ ಎಂದರೆ ದಾಖಲಾತಿಗಳನ್ನು ತೋರಿಸಿ ಬರವಣಿಗೆ ಮಾಡಿರುತ್ತಾರೆ ಎನ್ನುತ್ತಾರೆ. ನಿಪಿ.8 ರ ಸ್ಥಳವು ಕಂದಾಯ ಇಲಾಖೆಗೆ ಒಳಪಡುತ್ತದೆ. ಸದರಿ ಜಾಗದ ಚೆಕ್ಕುಬಂಧಿ ಪೂರ್ವಕ್ಕೆ ಸರ್ಕಾರಿ ಕಾಡು, ಪಶ್ಚಿಮಕ್ಕೆ ಸರ್ಕಾರಿ ಕಾಡು, ಉತ್ತರಕ್ಕೆ ಶ್ರೀನಿವಾಸ ಗೌಡ ರ ತೋಟ ಹಾಗೂ ದಕ್ಷಿಣಕ್ಕೆ ಸರ್ಕಾರಿ ರಸ್ತೆ ಬರುತ್ತದೆ. ದಿಃ25/12/2021 ರಂದು ಸಂಜೆ 4-00 ರಿಂದ 4-30 ಸಮಯಕ್ಕೆ ಚಾಸಾ 1 ರವರ ತೋಟಕ್ಕೆ ನನ್ನನ್ನು ಪೋಲಿಸರು ಕರೆದುಕೊಂಡು ಹೋಗಿರುತ್ತಾರೆ. ಆ ಸಮಯದಲ್ಲಿ ನನ್ನೊಂದಿಗೆ 4 ಜನರು ಇದ್ದು 1 ನೇ ಆರೋಪಿ ಇದ್ದು

ಉಳಿದವರು ಯಾರೆಂದು ಗೊತ್ತಿರುವುದಿಲ್ಲ. ಪೊಲಿಸರು ಮಹಜರಿಗೆ ಹಾಜರಾಗುವಂತೆ ತಿಳುವಳಿಕೆ ನೋಟಿಸನ್ನು ನನಗೆ ಠಾಣೆಯಲ್ಲಿ ನೀಡಿದ್ದರು. ಸದರಿ ನೋಟಿಸ್ ನಲ್ಲಿ ಎಲ್ಲೆಲ್ಲಿ ಹಾಜರಾಗಬೇಕು ಎಂದು ನಮುದಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು, ಒಂದೇ ನೋಟಿಸ್ ನೀಡಿದ್ದರು ಎಂದು ನುಡಿಯುತ್ತಾರೆ. ಸದರಿ ನೋಟಿಸ್ ನಲ್ಲಿ ಎಲ್ಲಿ, ಎಷ್ಟು ಹೊತ್ತಿಗೆ ಹಾಜರಾಗಬೇಕಾಗಿತ್ತು ಎಂಬ ಬಗ್ಗೆ ನಮೂದಾಗಿತ್ತು ಎಂದರೆ ಆ ಬಗ್ಗೆ ನಮೂದು ಇರಲಿಲ್ಲ ಎಂದು ನುಡಿಯುತ್ತಾರೆ.

ಠಾಣೆಯಿಂದ ನೇರವಾಗಿ ನಾವು ಇಲಾಖಾ ವಾಹನದಲ್ಲಿ ಚಾಸಾ 1 ರವರ ತೋಟಕ್ಕೆ ಹೋಗಿದ್ದೆವು. ಆ ಸಮಯದಲ್ಲಿ ನನ್ನೊಂದಿಗೆ ಇಬ್ಬರು ಪೊಲಿಸರು ಇದ್ದು ಅವರ ಹೆಸರು ನನಗೆ ಗೊತ್ತಿಲ್ಲ. ಚಾಸಾ 1 ರವರ ತೋಟವನ್ನು ಪೋಲಿಸರು ನನಗೆ ತೋರಿಸಿದ್ದರು. ಬರವಣಿಗೆಯನ್ನು ಮಾಡಿದ್ದು ಅದನ್ನು ಯಾರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಚಾಸಾ 1 ರವರ ತೋಟ ಠಾಣೆಯಿಂದ ಸುಮಾರು 12 ಕಿಮೀ ಅಂತರ ಇರುತ್ತದೆ. ನಿಮ್ಮ ಈ ಪ್ರಕರಣಕ್ಕೆ ಸಂಬಂದಿಸಿದಂತೆ ಯಾರದ್ದಾದರೂ ಹೇಳಿಕೆ ಪಡೆಯಲಾಗಿತ್ತೆ ಎಂದರೆ ಯಾರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಎನ್ನುತ್ತಾರೆ.

ನಾನು ಠಾಣೆಗೆ ಹೋಗುವಷ್ಟರಲ್ಲಿ ನಿಪಿ.17 ಮತ್ತು 18 ಅನ್ನು ಬರೆದಾಗಿತ್ತು. ಸದರಿ ನಿಪಿ.17 ಹಾಗೂ 18 ರಲ್ಲಿರುವ ಬರವಣಿಗೆಯನ್ನು ಕೈಬರಹದಲ್ಲಿ ಬರೆಯಲಾಗಿರುತ್ತದೆ. ನಿಪಿ.17 ಹಾಗೂ 18 ಗಣಕೀಕೃತ ದಾಖಲೆಗಳಾಗಿರುತ್ತವೆ ಎಂದರೆ ಸರಿ. ನಿಪಿ.17 ಹಾಗೂ 18 ಅನ್ನು ಯಾರು ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗೆ ಬೆರಳಚ್ಚು ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಪೋಲಿಸರು ಮಾಹಿತಿ ನೀಡಿರುವುದಿಲ್ಲ ಎಂದರೆ ಸರಿ.

ನಾನು ಪೋಲಿಸ್ ಠಾಣೆಯಲ್ಲಿ ಸುಮಾರು 2 ಗಂಟೆಗಳ ಕಾಲ ಇದ್ದೆನು. ನಾನು ಠಾಣೆಗೆ ಹೋಗುವಾಗ ಸುಮಾರು 2 ಗಂಟೆ ಸಮಯವಾಗಿತ್ತು. ಚಾಸಾ 1 ರವರ ತೋಟ ಸರ್ವೆ ನಂಬರ್ 158 ರಲ್ಲಿ ಇದ್ದು ಸದರಿ ಸರ್ವೆ ನಂಬರ್ ಚಾಸಾ 1 ರವರಿಗೇ ಸಂಬಂಧಿಸಿದ್ದಾಗಿರುತ್ತದೆ.

ಅಮಾನತುಪಡಿಸಿಕೊಳ್ಳಲಾಯಿತು ಎನ್ನಲಾದ ಅಡಿಕೆ ತುಂಬಿದ ಯಾವುದೇ ಚೀಲಗಳು ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಚಾಸಾ 1 ರವರ ತೋಟವು ಸರ್ವೆ ನಂಬರ್ 158 ಎಂದು ನಿಮಗೆ ಯಾರು ತಿಳಿಸಿದ್ದರು ಎಂದರೆ ನನಗೆ ಯಾರೂ ಹೇಳಿರುವುದಿಲ್ಲ, ನನಗೇ ತಿಳಿದಿರುತ್ತದೆ ಎನ್ನುತ್ತಾರೆ. ಪೋಟೋವನ್ನು ತೆಗೆಯಲಾಗಿತ್ತು ಎಂದು ನಾನು ನುಡಿದಿದ್ದು ಸದರಿ ದಿನ ಪೋಲಿಸರು ಪೋಟೋವನ್ನು ನನಗೆ ತೋರಿಸಿರುವುದಿಲ್ಲ. ಸದರಿ ಪೋಟೋವನ್ನು 4 ದಿನ ಬಿಟ್ಟು ಪೋಲಿಸ್ ಠಾಣೆಯಲ್ಲಿ ನೋಡಿರುತ್ತೇನೆ. ಸದರಿ ಪೋಟೊಗಳನ್ನು ಬಾಳೆಹೊನ್ನೂರಿನ

ಪೋಟೋ ಗ್ರಾಫರ್ ತೆಗೆದಿರುತ್ತಾರೆ ಎನ್ನುತ್ತಾರೆ. ಸದರಿ ಪೋಟೋಗ್ರಾಪರ್ ಅವರನ್ನು ಚಾಸಾ 1 ರವರು ಕರೆ ತಂದಿದದ್ದರು. ಚಾಸಾ 1 ರವರ ತೋಟದಲ್ಲಿ 1 ಸಹಿ ಮಾಡಿರುತ್ತೇನೆ. ನಾನು ಮತ್ತು ಚಾಸಾ 5 ರವರನ್ನು ಬಿಟ್ಟು ಬೇರೆ ಯಾರು ಸಹಿ ಮಾಡಿರುತ್ತಾರೇ ಎಂದು ಗೊತ್ತಿಲ್ಲ. ಚಾಸಾ 1 ರವರ ಮನೆಯಿಂದ 1 ನೇ ಆರೋಪಿಯ ಮನೆಗೆ ಸುಮಾರು 2 ಕಿಮಿ ಅಂತರ ಇರುತ್ತದೆ. 1 ನೇ ಆರೋಪಿಯ ಮನೆಯನ್ನು ಪೋಲಿಸರು ತೋರಿಸಿದ್ದರು. 1 ನೇ ಆರೋಪಿಯ ಮನೆಗೆ ಹೋದಾಗ ಅವರ ತಾಯಿ ಇದ್ದರು, ಅವರ ಹೆಸರು ನನಗೆ ಗೊತ್ತಿಲ್ಲ. 1 ನೇ ಆರೋಪಿಯ ಮನೆಯ ಅಕ್ಕ ಪಕ್ಕ ತುಂಬಾ ಮನೆಗಳು ಇದ್ದು ಅವುಗಳಲ್ಲಿ ಯಾರು ಇರುತ್ತಾರೆ ಎಂದು ಗೊತ್ತಿಲ್ಲ. ಸದರಿ ಸ್ಥಳದಲ್ಲಿ ಬರವಣಿಗೆಯಾಗಿದ್ದು ಸದರಿ ಬರವಣಿಗೆಯನ್ನು ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗೂ ಮಾಡಿರುತ್ತಾರೆ ಎಂದರೆ ನನಗೇ ಗೊತ್ತಿಲ್ಲ. ಸದರಿ ಸ್ಥಳದ ಪೋಟೋವನ್ನು ನನಗೆ ಪೋಲಿಸರು ತೋರಿಸಿರುವುದಿಲ್ಲ. ಮು ಮಾಲು1 ಕೃತ್ಯಕ್ಕೆ ಸಂಬಂಧಿಸಿದ್ದು ಎಂಬ ಬಗ್ಗೆ ಯಾವುದೇ ನಿರ್ದಿಷ್ಟ ಗುರುತಿಲ್ಲ ಎಂದರೆ ಸರಿ . ಮುದ್ದೆ ಮಾಲು 1 ರ ರೀತಿಯ ವಸ್ತು ಸಾಮಾನ್ಯವಾಗಿ ಎಲ್ಲಾ ಕೃಷಿಕರ ಮನೆಯಲ್ಲಿ ಇರುತ್ತವೆ ಎಂದರೆ ಸರಿ. ನಿಪಿ.14 ರ ಕಾಲಕ್ಕೆ ನಾವು 15 ನಿಮಿಷ ಮಾತ್ರ ಸ್ಥಳದಲ್ಲಿ ಇದ್ದೆವು. 1 ನೇ ಆರೋಪಿಯ ಮನೆಯಿಂದ ನಾವು ನೇರವಾಗಿ ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಅಂಗಡಿಯ ಬಳಿ ಹೋಗುವ ಪೂರ್ವದಲ್ಲಿ ನನಗೆ ಪೋಲಿಸರು ಯಾವುದೆ ನೋಟಿಸ್ ನೀಡಿರುವುದಿಲ್ಲ. ಸದರಿ ಅಂಗಡಿ ಯಾರದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಅಂಗಡಿ ಯಾರಿಗೆ ಸೇರಿದ್ದು ಹಾಗೂ ಅಂಗಡಿ ಮಾಲಿಕರು ಯಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಅಂಗಡಿಯನ್ನು ಪೋಲಿಸರು ನನಗೆ ತೋರಿಸಿದ್ದರು ಎಂದರೆ ಸರಿ. ಸದರಿ ಸ್ಥಳದಲ್ಲಿ ಯಾವ ಉದ್ದೇಶಕ್ಕೆ ಬರವಣಿಗೆಯಾಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಅಡಿಕೆಯನ್ನು ನನ್ನ ಸಮಕ್ಷಮ ತೂಕ ಮಾಡಿರುವುದಿಲ್ಲ ಎಂದರೆ ಸರಿ.

ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ ಹಾಗೂ ನನ್ನ ಸಮಕ್ಷಮದಲ್ಲಿ ಯಾವುದೇ ಮುದ್ದೆ ಮಾಲು ವಶಕ್ಕೆ ಪಡೆದಿಲ್ಲ ಹಾಗೂ ಯಾವುದೇ ಮಹಜರ್ ಅನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಮು ಮಾಲಿಗೂ ಹಾಗೂ ಆರೋಪಿತರಿಗೂ ಸಂಬಂಧ ಇಲ್ಲ ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ **2** ನೇ ಆರೋಪಿತರ ಪರ ಃ ಕುಮಾರಿ ಎಂಜಿ., ವಕೀಲರಿಂದಃ

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)

<u>ಪಾಟೀ ಸವಾಲುಃ **3** ಮತ್ತು **4** ನೇ ಆರೋಪಿತರ ಪರ ಃ ಶ್ರೀ ಎಂ ಎನ್ ಎಸ್ **.,** ವಕೀಲರಿಂದಃ</u>

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)

<u>ಪಾಟೀ ಸವಾಲುಃ **5** ನೇ ಆರೋಪಿತರ ಪರ ಃ ಶ್ರೀ ಬಿಎಸ್ ಎನ್**.,** ವಕೀಲರಿಂದಃ</u>

(1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.)

ಮರು ವಿಚಾರಣೆ ಇಲ್ಲ.

(ದಿನಾಂಕಃ 10/10/2025 ರಂದು ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ